Volume: 3 Issue: 3 Pages: 06-08




# ಕರ್ವಾಲೋ ಕಾದಂಬರಿಯಲ್ಲಿ ಅಲಕ್ಷಿತ ಪಾತ್ರಗಳ ವಿಶಿಷ್ಟತೆ-ಒಂದು ಚರ್ಚೆ

*1 Prakash B

*1 Research Student, Department of Kannada, University of Mysore, Mysore, Karnataka, India.

**Article Info.**
**E-ISSN:** 2583-6528
**Impact Factor (SJIF):** 5.231
**Peer Reviewed Journal**
**Available online:**
www.alladvancejournal.com

**Received:** 25/Feb/2024
**Accepted:** 05/Mar/2024

***Corresponding Author**
**Prakash B**
Research Student, Department of Kannada, University of Mysore, Mysore, Karnataka, India.

**Abstract**
ಅಲಕ್ಷಿತ ಪ್ರತಿಭೆಗಳು ತಮ್ಮಂತೆಯೇ ಇನ್ನೊಬ್ಬರ ಬಳಿಯಿರುವ ಜ್ಞಾನವನ್ನು ಕಂಡು ಅಸೂಯೆ ಪಡುವುದನ್ನು ಕಾಣಬಹುದು. ವಿಶಿಷ್ಟ ಶಕ್ತಿ, ಯೋಜನೆ, ಅನುಭವ ಜ್ಞಾನ ವಿಸ್ತಾರವಾಗುವುದನ್ನು ಹೆಚ್ಚಿನ ಬುದ್ಧಿವಂತಿಕೆಯನ್ನು ತಮಗಿಂತ ಕೆಳಗಿನ ಹಂತದ ಜೀವಗಳು ಹೊಂದುವುದು ಸಹಿಸುವುದಿಲ್ಲ. ಇದನ್ನು ಬೈರ ನಾಯಿ ರಾಮನ ಶಿಕಾರಿ ಸ್ವರೂಪ ಕಂಡು ಹೊಟ್ಟೆಕಿಚ್ಚು ಪಡುವ ಬೈರನ ಮನಸ್ಥಿತಿಯ ಸಂದರ್ಭದಲ್ಲಿ ಕಾಣಬಹುದಾಗಿದೆ. ಯಾವುದೇ ಜ್ಞಾನ, ಪ್ರತಿಭೆ ಅಮಾನವೀಯ ಆಗದು ಎನ್ನುವುದು ಮಾನವ ಸಹಜ ಆಲೋಚನೆ. ಆದರೆ ಪ್ರಕೃತಿ ನಿಯಮದಲ್ಲಿ ಈ ಭಾವನೆಗೆ ಅವಕಾಶವಿಲ್ಲ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರತಿಭೆ, ಆಲೋಚನೆ, ಮತ್ತು ಚಿಂತನೆಗಳು ಏಕರೂಪದಲ್ಲಿರುವುದಿಲ್ಲ. ನಿಸರ್ಗದ ನಿಯಮದಂತೆ ಹಾಗೆ ಇರಬಾರದೂ ಕೂಡ. ಈ ವಿಭಿನ್ನತೆಯ ಕಾರಣದಿಂದ ಇಡೀ ಜಗತ್ತು ವೈವಿಧ್ಯಮಯವಾಗಿ ಕಾಣುತ್ತದೆ. ಪ್ರತಿಯೊಂದು ಜೀವಿಯೂ ತನ್ನೊಳಗಿನ ಬುದ್ಧಿಶಕ್ತಿ, ತಿಳಿವು, ಅನುಭವದ ಕಥನಗಳಲ್ಲಿ ಬರುವ ಬಹಳಷ್ಟು ಪಾತ್ರಗಳು ಈ ವ್ಯಕ್ತಿವಿಶಿಷ್ಟವಾದದ ಸೈದ್ಧಾಂತಿಕತೆಯ ಚೌಕಟ್ಟಿನಲ್ಲಿ ಬರುತ್ತವೆ.

**Keywords:** ಅಲಕ್ಷಿತ ಪಾತ್ರ, ವ್ಯಕ್ತಿವಿಶಿಷ್ಟವಾದ, 'ಅಥೆಂಟಿಸಿಟಿ', ಕರ್ವಾಲೋ, ಮಂದಣ್ಣ, ಪ್ರಕೃತಿಸಖ್ಯ

## Introduction

ಅಲಕ್ಷಿತ ಪಾತ್ರಗಳೂ ಬದುಕಿನ ಒಂದೇ ಮೂಲದಿಂದ, ಒಂದೇ ಸ್ತರದಿಂದ ಬಂದಿದ್ದರೂ ಅವುಗಳ ವರ್ಗಗಳು ಜಾತಿ, ಅನುಸರಿಸುವ ರೀತಿ ನೀತಿ, ಒಪ್ಪುವ ಜೀವನ ಧರ್ಮ, ಮತ್ತು ತಾತ್ವಿಕ ಧೋರಣೆಗಳು ಬೇರೆ ಬೇರೆಯೇ ಆಗಿವೆ. ಕರಿಯಪ್ಪನಂಥ ಕಡಿಮೆ ತಿಳಿವಳಿಕೆಗೆ ಎಟುಕುವ ಮನುಷ್ಯನೂ ತನ್ನ ಸೀಮಿತ ಬೌದ್ಧಿಕ ಚೌಕಟ್ಟಿನಲ್ಲಿ ತತ್ವಶಾಸ್ತ್ರದ ಮಾತುಗಳನ್ನು ಆಡುತ್ತಾನೆ. ಅವನ ಅರಿವಿನ ಮಟ್ಟಕ್ಕೆ ಸಿಗುವ ಅವನ ನಂಬಿಕೆಯ 'ದೇವರು' ಇದ್ದಾನೆ. ಅದನ್ನೂ ಅವನೂ 'ಸಾಕ್ಷಾಧಾರ' ಇಲ್ಲದೆ ನಂಬದಷ್ಟು ವೈಚಾರಿಕನೂ ಆಗಿದ್ದಾನೆ. ದೇವರನ್ನು ನಂಬೋದು, ಬಿಡೋದು ಎಲ್ಲಾ ನಿರುಪಯುಕ್ತ 'ಚರ್ಚೆ' ಎನ್ನುವ ಕರ್ವಾಲೊ ಅವರ ವೈಚಾರಿಕ ತಿಳಿವಳಿಕೆಗೆ ಕರಿಯಪ್ಪನ ತಾತ್ವಿಕ ತರ್ಕವೂ ಅಷ್ಟೇ ಜೋರಾಗಿರುತ್ತದೆ. ಕರಿಯಪ್ಪ ಸಾಮಾನ್ಯ ಮನುಷ್ಯನಂತೆ ಕಂಡರೂ ತತ್ವಬದ್ಧ ಮಾತುಗಳನ್ನು ಹೇಳುವಾಗ ಕಡುಜಾಣನಾಗಿ ಕಾಣುತ್ತಾನೆ. 'ಅಲ್ಲಯ್ಯ, ದೇವ್ರಿಲ್ಲಾಂತಾದ್ರೆ ಇಷ್ಟೊಂದು ಇಚಿತ್ರ ಯಾಕಿರಬೇಕಿತ್ತು, ನೂರೆಂಟು ತರ ಹಕ್ಕಿ, ಹುಳ, ಹುಪ್ಪಟೆ, ಮೈಲುಗಟ್ಟಲೆ ಹೋಗಿದ್ದ ಜೇನು ವಾಪಾಸ್ ಗೂಡಿಗೆ ಬರ್ತದಲ್ಲಾ! ಕಡ್ಡಿಹುಳ ಕಡ್ಡಿಗಳ ಮಧ್ಯೆ ಇರೋದು! ಎಲೆ ಹುಳು ಎದೆ ಮಧ್ಯೆ ಕೂರೋದು, ಗೋಸುಂಬೆ ಬಣ್ಣ ಬದಲಿಸಿ ಕಣ್ಣಿಗೆ ಕಾಣದಂಗೆ ಮಾಡ್ಕೊಳ್ಳೋದು. ಇವೆಲ್ಲಾ ನೋಡಿದರೆ ದೇವ್ರಿಲ್ಲಾಂಥ...ಎAದು ಹೇಳಿ ತಳ ಹತ್ತುವ ಅನ್ನದ ಕಡೆ ಧಾವಿಸುವ ಕರಿಯಪ್ಪ ಏಕಕಾಲದಲ್ಲಿ ದೈವದ ಕುರಿತ ತನ್ನ ಆಲೋಚನೆಗಳನ್ನು; ಅನ್ನ ಉಂಡು ಬದುಕುವ ಸಧ್ಯದ ಬದುಕಿನ ಸಾರವನ್ನು ಹೇಳಿಸುವ ಮೂಲಕ ಕಥನ ಅಲಕ್ಷಿತ ಪ್ರತಿಭೆಗಳಿಗಿರುವ ತಾತ್ವಿಕ ಪ್ರಮೇಯ ಕಟ್ಟುತ್ತದೆ.ಕಾದಂಬರಿಯಲ್ಲಿ ಮಂದಣ್ಣ, ಬಿರಿಯಾನಿ ಕರಿಯಪ್ಪ, ನಾಯಿ ಕಿವಿ, ಎಂಕ್ಟ ನಿಸರ್ಗ ಎಲ್ಲರ ಪಾತ್ರಗಳ ವೈಶಿಷ್ಟ್ಯತೆಗಳು, ಅವರವರ ಪ್ರತಿಭೆಗಳೂ ವಿಭಿನ್ನ ಎಲ್ಲರೂ ತಾವು ಕಲಿತ ಪ್ರತಿಭೆಯನ್ನು ತಮ್ಮ ಒಳಿತಿಗೆ, ಸಹಜ ಬದುಕಿಗೆ ಸೀಮಿತಗೊಳಿಸಿಕೊಂಡವರು. ಯಾರಿಗೂ ಉಪದ್ರವ ಮಾಡದ ತಮ್ಮ ಪ್ರತಿಭೆಯಿಂದ ತಾವು ಬದುಕುವ ಜಗದ ಒಳಿತನ್ನು ಬಯಸುವ ಕೆಡುಕಿನ ಬಗ್ಗೆ ಯೋಚಿಸಿದ ಇತ್ಯಾತ್ಮಕ ಅಲಕ್ಷಿತ ಪಾತ್ರಗಳನ್ನೇ ತೇಜಸ್ವಿ ಕಥನ ಚಿತ್ರಿಸುತ್ತದೆ. ಬೈರನ ನಾಯಿ ಸ್ವತಂತ್ರವಾಗಿ ಶಿಕಾರಿ ಆರಂಭಿಸಿ ತನ್ನ ಅನುಭವ ಜ್ಞಾನವನ್ನು ಹೆಚ್ಚಿಸಿಕೊಳ್ಳುವುದು ವ್ಯಕ್ತಿ ವಿಶಿಷ್ಟವಾದಕ್ಕೆ ಪುಷ್ಠಿ ಕೊಡುವ ಸಂಗತಿ. ಇದರ ಈ ವಿಶಿಷ್ಟತೆಯನ್ನು ಒಪ್ಪದ

ಅದರ ಮಾಲಿಕ ಬೈರ ತೋಟದ ಸುತ್ತಮುತ್ತ ಇರುವ ಕೋಳಿ, ಮೊಲ ಇತ್ಯಾದಿಗಳನ್ನು ಹಿಡಿಯುವ ಪ್ರಯತ್ನದಲ್ಲಿ ಈ ನಾಯಿ ಅವುಗಳನ್ನು ದೂರದ ಕಾಡಿಗೆ ಓಡಿಸುತ್ತಿತ್ತೆಂದೂ ನೆವ ಹೇಳಿ ಅದನ್ನು ಕಟ್ಟಿಹಾಕುತ್ತಾನೆ. ತಾನೇ ಶಿಕಾರಿ ಮಾಡಿ ತನ್ನ ಶ್ರಮವನ್ನು ಉಣ್ಣುವ ಆದರ ಸ್ವಾತಂತ್ರ್ಯ ಬೈರನಿಗೆ ಪಥ್ಯವಾಗುವುದಿಲ್ಲ. ಶಿಕಾರಿಯ ಪಟ್ಟುಗಳನ್ನು ಒಂದು ಪ್ರತಿಭೆಯಾಗಿ ಕಲಿತ ಅವನ ಬಳಿ ಶಿಕಾರಿಯ ಲಕ್ಷಾಂತರ ವರಸೆಗಳಿದ್ದವು. ತನ್ನಂತೆ ತನ್ನ ನಾಯಿ ಯಶಸ್ವಿ ಶಿಕಾರಿದಾರನಾಗುವ ಆಸೆ ಬೈರನಿಗಿತ್ತೇ ಹೊರತು ಅದು ತನ್ನ ಅನುಮತಿ ಮೀರಿ ನಿರಂಕುಶವಾಗುವುದು ಇಷ್ಟವಿರಲಿಲ್ಲ. ಹೀಗಾಗಿ ಅದನ್ನು ಆತ ಶಿಕಾರಿಯಲ್ಲಿ ನಿಯಂತ್ರಿಸುತ್ತಾನೆ. ಅಲಕ್ಷಿತ ಪ್ರತಿಭೆಗಳು ತಮ್ಮಂತೆಯೇ ಇನ್ನೊಬ್ಬರ ಬಳಿಯಿರುವ ಜ್ಞಾನವನ್ನು ಕಂಡು ಅಸೂಯೆ ಪಡುವುದನ್ನು ಕಾಣಬಹುದು. ವಿಶಿಷ್ಟ ಶಕ್ತಿ, ಯೋಜನೆ, ಅನುಭವ ಜ್ಞಾನ ವಿಸ್ತಾರವಾಗುವುದನ್ನು ಹೆಚ್ಚಿನ ಬುದ್ಧಿವಂತಿಕೆಯನ್ನು ತಮಗಿಂತ ಕೆಳಗಿನ ಹಂತದ ಜೀವಗಳು ಹೊಂದುವುದು ಸಹಿಸುವುದಿಲ್ಲ. ಇದನ್ನು ಬೈರ ನಾಯಿ ರಾಮನ ಶಿಕಾರಿ ಸ್ವರೂಪ ಕಂಡು ಹೊಟ್ಟೆಕಿಚ್ಚು ಪಡುವ ಬೈರನ ಮನಸ್ಥಿತಿಯ ಸಂದರ್ಭದಲ್ಲಿ ಕಾಣಬಹುದಾಗಿದೆ. ತನ್ನ ಮಗನ ಹೆಣವನ್ನು ಶಿಕಾರಿಯ ಪರಿಕರವಾಗಿ ಬಳಸುವ ಮರಸರನದು ಅಲಕ್ಷಿತ ಪ್ರತಿಭೆಗಿಂತ ಅಮಾನವೀಯ ನಡೆ ಎಂದಷ್ಟೇ ಹೇಳಬಹುದು. ಯಾವುದೇ ಜ್ಞಾನ, ಪ್ರತಿಭೆ ಅಮಾನವೀಯ ಆಗದು ಎನ್ನುವುದು ಮಾನವ ಸಹಜ ಆಲೋಚನೆ. ಆದರೆ ಪ್ರಕೃತಿ ನಿಯಮದಲ್ಲಿ ಈ ಭಾವನೆಗೆ ಅವಕಾಶವಿಲ್ಲ. ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರತಿಭೆ, ಆಲೋಚನೆ, ಮತ್ತು ಚಿಂತನೆಗಳು ಏಕರೂಪದಲ್ಲಿರುವುದಿಲ್ಲ. ನಿಸರ್ಗದ ನಿಯಮದಂತೆ ಹಾಗೆ ಇರಬಾರದೂ ಕೂಡ. ಈ ವಿಭಿನ್ನತೆಯ ಕಾರಣದಿಂದ ಇಡೀ ಜಗತ್ತು ವೈವಿಧ್ಯಮಯವಾಗಿ ಕಾಣುತ್ತದೆ. ಪ್ರತಿಯೊಂದು ಜೀವಿಯೂ ತನ್ನೊಳಗಿನ ಬುದ್ಧಿಶಕ್ತಿ, ತಿಳಿವು, ಅನುಭವದ ಕಥನಗಳಲ್ಲಿ ಬರುವ ಬಹಳಷ್ಟು ಪಾತ್ರಗಳು ಈ ವ್ಯಕ್ತಿವಿಶಿಷ್ಟವಾದದ ಸೈದ್ಧಾಂತಿಕತೆಯ ಚೌಕಟ್ಟಿನಲ್ಲಿ ಬರುತ್ತವೆ. ಅವುಗಳಲ್ಲಿ ಚೀಂಕ್ರನು ಒಬ್ಬ, ಅವನು ತನ್ನ ಮಗನ ಸಾವನ್ನು ಧ್ಯಾನಿಸುತ್ತಲೇ ತನ್ನೊಳಗೆ ಮೌನಿಯಾಗುತ್ತಾನೆ. ಅವನ ಮೌನ, ಹಾವುಮೀನ ಬಗ್ಗೆ ಪ್ರತಿಭೆಯನ್ನು ಕ್ರಿಯಾಶೀಲಗೊಳಿಸುತ್ತದೆ ತೇಜಸ್ವಿ ಕಥನಗಳು ರೂಪಿಸಿರುವ ಮನುಷ್ಯಲೋಕದ ಬಗ್ಗೆ ತಮ್ಮ ಅನುಭವ ಹಂಚಿಕೊAಡಿರುವ ಲೇಖಕ ಹಾಗೂ ತೇಜಸ್ವಿ ಗೆಳೆಯರಾದ ಪ್ರೊ.ಪಾಂಡುರAಗ ಉಡುಪರು "ತೇಜಸ್ವಿ ಕೃತಿಗಳಲ್ಲಿ ಬರುವ ಮಂದಣ್ಣ, ಕರಿಯಪ್ಪ, ವೆಂಕಟ, ಮಾರ, ಪ್ಯಾರ ಯಾರೇ ಆಗಬಹುದು. ಅವರ ಮೈಮೇಲೆ ನೆಟ್ಟಗೆ ಬಟ್ಟೆಯೂ ಇರೋದಿಲ್ಲ. ಒಂದು ಲಂಗೋಟಿ ಬಿಟ್ಟು. ಆದರೆ ಮಾತು, ಕಥೆ, ಬೈಗುಳ ಇವುಗಳಲ್ಲಿ ಸಭ್ಯಾಸಭ್ಯತೆ, ಇತಿ ಮಿತಿ ಇಲ್ಲ. ಏಕೆಂದರೆ ನಮ್ಮ ಹಾಗೆ ಸಭ್ಯರಾಗಿ ಕಾಣಿಸಿಕೊಳ್ಳುವುದರಿಂದ ಅವರಿಗೆ ಯಾವ ಉಪಯೋಗವೂ ಇಲ್ಲ. ಅಂಥ ಜನ ಇವತ್ತಿಗೂ ಕೂಡ ನಮ್ಮ ಹಳ್ಳಿಯ ಕಡೆ ಸಿಕ್ಕುತ್ತಾರೆ. ಅಲ್ಲೊಬ್ಬ ಕುಡುಕ ಅಂತ ಅಂದರೆ ವಂಡರ್‌ಫುಲ್ ಕುಡುಕ ಸಿಗ್ತಾನೆ. ನಮ್ಮಲ್ಲಿ ಕುಡುಕ ಆದರೂ ಸಭ್ಯನ ಹಾಗೆ ಕಾಣಿಸಿಕೊಳ್ಳಲು ಪ್ರಯತ್ನಿಸುವುದನ್ನು ಕಾಣಬಹುದು. ಹಳ್ಳಿಗಳ ಕಡೆ ಚಿತ್ರವಿಚಿತ್ರವಾದ ಜನ ಸಿಗುತ್ತಾರೆ. ಅವರ ನಡೆ-ನುಡಿ ರೀತಿ-ನೀತಿಗಳು ಒಬ್ಬನಿಗಿಂತ ಇನ್ನೊಬ್ಬನಲ್ಲಿ ಭಿನ್ನವಾಗಿರುತ್ತವೆ. ವಿಶಿಷ್ಟವಾಗಿ ಕಾಣುತ್ತವೆ. ಇಲ್ಲಿ ನಮ್ಮಲ್ಲಿ ಬಹಳ ಜನ ಬೇರೆ ಬೇರೆ ಕೆಲಸ ಮಾಡಿದವರು ಇರಬಹುದು. ಆದರೆ ಹಳ್ಳಿಕಡೆ ಹೆಚ್ಚಿನವರು ರೈತ ಮತ್ತು ಕೂಲಿಯವರೇ ಆದರೂ ಒಂದು ಗುಂಪಿಗೆ ಸೇರಿಸುವುದು ಕಷ್ಟ ಆಗುತ್ತೆ ಅಂಥ ಪಾತ್ರಗಳೇ ಹೆಚ್ಚು ಜೀವಂತವಾಗಿರುತ್ತವೆ. ನಮ್ಮ ಪೇಟೆ ಬದುಕಿಗಿಂತ ಹಳ್ಳಿಯ ಬದುಕಿನಲ್ಲಿ ಹೆಚ್ಚು ಜೀವಂತಿಕೆಯಿರುತ್ತದೆ ಎನ್ನುತ್ತಾರೆ. ಪರಿಸರದ ಬಗ್ಗೆ ತೇಜಸ್ವಿಯವರಿಗೆ ಇದ್ದ ಕಾಳಜಿಯನ್ನು ಅವರ ಬರಹಗಳ ಮೂಲಕ ತಿಳಿದ ಮೇಲೆ ಇಕಾಲಜಿಯನ್ನು ಪಠ್ಯವಾಗಿ ಓದಿದ್ದ ನನಗೆ ಒಂದು ಹೊಸ ಜ್ಞಾನೋದಯ ಆಯ್ತು. ಅದುವರೆಗೆ ನೀರು ತುಂಬಿದ ಗುಂಡಿಗಳಾಗಿದ್ದ ಕೆರೆಕುಂಟೆಗಳು ನನಗೆ ಸಜೀವ ಭಂಡಾರಗಳಾದವು. ಒಂದು ಕೆರೆ, ಅದರಲ್ಲಿ ನೀರುಹಕ್ಕಿಗಳು, ಕಪ್ಪೆ, ಕೀಟಾದಿಗಳು, ಜೊಂಡು, ತಾವರೆ ಏನೇನೋ ಕಂಡಾಗ ಇಲ್ಲೇನೋ ಆಗುತ್ತಿದೆ. ಇಲ್ಲಿ ಜೀವಸಂಚಲನವಿದೆ ಎಂಬ ಸತ್ಯ ಆಗಷ್ಟೇ ಹೊಳೆದಂತೆ ರೋಮಾಂಚನಗೊAಡೆ.ಪರಿಸರವೆAದರೆ ನಿಮ್ಮ ಸುತ್ತಮುತ್ತಲಿರುವ ಗಿಡ, ಮರ, ಬಳ್ಳಿ, ಕಾಡು ಮಾತ್ರವಲ್ಲ. ನೀವು ಮನುಷ್ಯರು ಸಹ ಈ ಪರಿಸರದೊಳಗಿರುವ ಜೀವಿಗಳು ಎನ್ನುವುದನ್ನು ಮರೆಯದಿರಿ ಎನ್ನುತ್ತಿದ್ದರು ತಮ್ಮ ಮಾತು ಕೃತಿಗಳಿಂದ ತೇಜಸ್ವಿ ಅನೇಕರನ್ನು ಆರೋಗ್ಯಕರವಾಗಿ ಪ್ರಚೋದಿಸಿದರು

‘ಕರ್ವಾಲೋ' ಕಾದಂಬರಿಯ ಒಂದು ತುದಿ ವಿಜ್ಞಾನವಾದರೆ ಇನ್ನೊಂದು ತುದಿ ಪ್ರಕೃತಿ. ೨೧ನೇ ಶತಮಾನಕ್ಕೆ ಕಾಲಿರಿಸುತ್ತಿರುವ ಮನುಷ್ಯನ ಮಹತ್ತರ ವೈಜ್ಞಾನಿಕ ಸಾಧನೆಯ ತುತ್ತತುದಿಯ ಘಟ್ಟದಿಂದ ಆರಂಭವಾಗುವ ಈ ಕಾದಂಬರಿ ಬಂದು ನಿಲ್ಲುವುದು ಈ ಸಾಧನೆಯ ಅಲ್ಪತೆಯನ್ನು ತೋರಿಸುವ ಹಂತದಲ್ಲಿ. ನಾಗರಿಕ ಬದುಕಿನ ಧಾವಂತದಲ್ಲಿ ತೀರ ಕ್ಷುಲ್ಲಕ ವಸ್ತು ಎನ್ನುವಂತೆ ಉಪೇಕ್ಷೆಗೆ, ಅವಜ್ಞೆಗೆ ಒಳಗಾಗಿರುವ ಪ್ರಕೃತಿ ಕಾದಂಬರಿ ಬೆಳೆದಂತೆ ತನ್ನ ನಿಗೂಢತೆಯ ಸ್ವರೂಪವನ್ನು ಎಳೆಎಳೆಯಾಗಿ ಬಿಚ್ಚುತ್ತ ನಿಗೂಢವೇ ಆಗಿ ಉಳಿಯುವುದು, ಅದ್ಭುತಗಳನ್ನು ತೋರುತ್ತಲೇ ವಿಸ್ಮಯವಾಗಿ ಉಳಿಯುವುದು. ಕೈಗೆಟುಕಿದಷ್ಟು ಹತ್ತಿರ ಬಂದAತೆ ಮಾಡಿ ದೂರವೇ ಉಳಿದುಬಿಡುವುದು, ಮನುಷ್ಯನ ಅಹಂಕಾರಕ್ಕೆ ಸವಾಲಾಗುವುದು, ಈ ಕೃತಿಯ ವಿಶೇಷ.ಈ ವಿಜ್ಞಾನಪ್ರಕೃತಿಗಳ ಎರಡು ತುದಿಗಳ ನಡುವೆ ಕಾದಂಬರಿಯ ಪಾತ್ರಗಳು ಬಂದು ಹೋಗುತ್ತವೆ; ಅವುಗಳ ಬದುಕು ಅಸ್ತಿತ್ವ ಪಡೆದುಕೊಳ್ಳುತ್ತದೆ. ಈ ಪಾತ್ರಗಳಲ್ಲೂ ನಮಗೆ ಎರಡು ವಿರುದ್ಧವಾದ ತುದಿಗಳೇ ಕಂಡು ಬರುತ್ತವೆ.ಇಲ್ಲಿನ ಮಂದಣ್ಣನನ್ನು ನೋಡಿ. ಅವನ ಮಾವ ನಾರ್ವೆ ರಾಮಯ್ಯನನ್ನು ನೋಡಿ. ಅವರ ಕಳ್ಳಬಟ್ಟಿಯ ವ್ಯವಹಾರ, ಪೊಲೀಸು-ಕೋರ್ಟು-ಜೈಲು-ಲಾಯರು: ಮಂದಣ್ಣನ ಕಾಡು-ಮೇಡು, ಹುಳು-ಹುಪ್ಪಟೆ; ಬಿರ್ಯಾನಿ ಕರಿಯಪ್ಪ, ಅವನ ಅಡಿಗೆಯ ವಿದ್ಯೆ, ಶಿಕಾರಿಯ ಜಾಣೆ, ಮರಹತ್ತುವ ಚಾಕಚಕ್ಯತೆ, ಅವನ ಗರ್ಮಿ ಸಾಮಾನುಗಳು, ಅದರ ‘ಪರಿಣಾಮ'ಗಳು; ಹಾವು ಗೊಲ್ಲರ ಎಂಗ ಹಾವನ್ನು ಹಿಡಿದು ವಿಷ ತೆಗೆಯುವ, ಚರ್‌ಮ ಸುಲಿಯುವ ಅವನ ವಿದ್ಯೆ. ಕಾಡು ಪ್ರಾಣಿಗಳ ಚರ್ಮ ತೆಗೆದು ಮಾರಿ ಬದುಕುವ ಅವನ ಜೀವನ ಶೈಲಿ:ಫಾರೆಸ್ಟು ಗಾರ್ಡುಗಳೊಂದಿಗೆ ವ್ಯವಹರಿಸುವ ಎಂಗ್ಟನ ಹೆಂಡತಿಯ ಜೀವನಧರ್ಮ ಮತ್ತು ನೀತಿ; ಅವರ ಕಾಡಿನ ಗಾಢ ಸಂಬAಧ; ಕರ್ವಾಲೋ ಅವರ ಸಂಶೋಧನೆಗಳು; ಅಷ್ಟೇಕೆ ಈ ಕಾದಂಬರಿಯ ಮುಖ್ಯ ಪಾತ್ರದಂತೆ ಚಿತ್ರಿತವಾಗಿರುವ ಕಿವಿ, ಅದರ ನಡವಳಿಕೆಗಳು; ಆಹಾರ ಕ್ರಮ, ರೋಗ-ರುಜಿನಗಳು ಯಾವುದನ್ನಾದರೂ ನೋಡಿ, ಒಂದೊAದೂ ಒಂದೊAದು ಪ್ರಪಂಚ. ಈ ಎಲ್ಲ ಪಾತ್ರಗಳೂ ಬದುಕಿನ ಒಂದೇ ಮೂಲದಿಂದ, ಒಂದೇ ಸ್ತರದಿಂದ ಬಂದವಲ್ಲ; ಇವುಗಳ ವರ್ಗಗಳು, ಜಾತಿಗಳು, ಬೇರೆ ಬೇರೆ; ಅನುಸರಿಸುವ ರೀತಿ- ನೀತಿಗಳು, ಜೀವನ ಧರ್ಮಗಳು, ಧೋರಣೆಗಳು ಬೇರೆ ಬೇರೆ. ಕರಿಯಪ್ಪನ ತಿಳುವಳಿಕೆಗೆ ಎಟುಕುವ, ಅವನ ಸೀಮಿತ ಅರ್ಥದ ತರ್ಕಕ್ಕೆ ಸಿಕ್ಕುವ, ಅವನ ನಂಬಿಕೆಯ ‘ದೇವರು' ಒಂದು ಬಗೆಯಾದರೆ, ಸಾಕ್ಷ್ಯಾಧಾರ ಇಲ್ಲದ ಯಾವುದನ್ನೂ ನಂಬೋದಿಲ್ಲ. ದೇವರನ್ನು ನಂಬೋದು, ಬಿಡೋದು ಎಲ್ಲಾ ನಿರುಪಯುಕ್ತ ಚರ್ಚೆ ಎನ್ನುವ ಕರ್ವಾಲೋ ಅವರ ತಿಳುವಳಿಕೆ ನಂಬಿಕೆಗಳೇ ಇನ್ನೊಂದು ರೀತಿಯವು. ಕರಿಯಪ್ಪನ ತರ್ಕ ಸುಲಭಗ್ರಾಹ್ಯವಾದದ್ದೆ? ಅಯ್ಯಾ, ದೇವ್ರಿಲ್ಲಾಂತಾದರೆ

ಇಷ್ಟೊಂದು ವಿಚಿತ್ರ ಯಾಕಿರಬೇಕಿತ್ತು. ನೂರೆಂಟು ತರ ಹಕ್ಕಿ ಹುಳ ಹುಪ್ಪಟೆ, ಮೈಲು ಗಟ್ಟಲೆ ಹೋಗಿದ್ದ ಜೇನು ವಾಪಸ್ ಗೂಡಿಗೇ ಬರದಲ್ಲಾ! ಕಡ್ಡಿ ಹುಳ ಕಡ್ಡಿಗಳ ಮಧ್ಯೆ ಇರೋದು! ಎಲೆ ಹುಳು ಎಲೆ ಮಧ್ಯೆ ಕೂರೋದು. ಗೋಸುಂಬೆ ಬಣ್ಣ ಬದಲಿಸಿ ಕಣ್ಣಿಗೆ ಕಾಣದಂಗೆ ಮಾಡ್ಕೊಳ್ಳೋದು, ಇವೆಲ್ಲಾ ನೋಡಿದರೆ ದೇವ್ರಿಲ್ಲಾಂತ.ಹೇಗೆ ಹೇಳೋದು'ಹೀಗೆ ವ್ಯಕ್ತಿಯ ವಿಶಿಷ್ಟ ಸಿದ್ಧಾಂತವನ್ನು ಹಿನ್ನೆಲೆಯಾಗಿಟ್ಟುಕೊಂಡು ಪ್ರತಿಯೊಂದು ಪಾತ್ರಕ್ಕೂ ಜೀವ ತುಂಬುವ ಪರಿಯನ್ನು ನಾವಿಲ್ಲಿ ಕಾಣಬಹುದು.ಇಷ್ಟೆ ಮುಖ್ಯವಾಗಿ ನಮಗೆ ವೇದ್ಯವಾಗುವುದು ಕಾದಂಬರಿಯ 'ಅಥೆಂಟಿಸಿಟಿ'. ಇದು ಕಾಣುವುದು ಪುಟ್ಟ ಪುಟ್ಟ ಸಂಗತಿಗಳಲ್ಲಿ; ಅವುಗಳ ಸೂಕ್ಷ್ಮವಿವರಗಳಲ್ಲಿ. ಅಂದರೆ ಕಾದಂಬರಿ ನಿಜವಾಗುವುದು ಇಂಥ ಸಂಗತಿಗಳಲ್ಲೆ, ಜೇನು ಸಾಕಣೆಯನ್ನೇ ತೆಗೆದುಕೊಳ್ಳಿ, ಗುರುಗಿ ಹೂ, ಅದು ಎಂಟು ವರ್ಷಗಳಿಗೊಮ್ಮೆ ಹೂ ಬಿಡುವ ಸಂಗತಿ, ಸಿಹಿ ಹೆಚ್ಚಾಗಿ ಅದರ ತುಪ್ಪ ಹರಳುಕಟ್ಟುವ ಮಾಹಿತಿ, ಮಡಕೆ ಜೇನಿನ ವಿವರ, ಪೆಟ್ಟಿಗೆಗೆ ಜೇನನ್ನು ಕೂರಿಸುವ ವಿಧಾನ; ರಾಣಿ ಜೇನಿನ ಮಾರ್ಗದರ್ಶನ ಇತ್ಯಾದಿ. ಹಾಗೆಯೇ ಗದ್ದೆ ನಾಟಿಯ ವಿಚಾರ, ಭತ್ತದ ಗದ್ದೆಗೆ ಬೀಳುವ ಹುಳುಗಳ ವಿವರ-ಇವೆಲ್ಲ ಎಷ್ಟು ನಿಖರವಾಗಿವೆ ಎಂದರೆ ಈ ಉದ್ಯಮಗಳಲ್ಲಿ ತೊಡಗುವವರಿಗೆ ತಿಳುವಳಿಕೆ ನೀಡುವ ಪಾಠಗಳಂತಿವೆ.ಪ್ರಕೃತಿಯ ಅನೇಕ ವಿಜ್ಞಾನ ವಿಸ್ಮಯಗಳನ್ನು ಬಲ್ಲ, ಕಾಡಿನಲ್ಲಿಯೇ ಹುಟ್ಟಿ ಬೆಳೆದ ಮಂದಣ್ಣನಿಗೆ ಗ್ಲೋವರ್ಮ್ ಆಗಲಿ, ಹಾರುವ ಓತಿಯಾಗಲಿ ಹೊಸ ಶೋಧನಗಳಲ್ಲ; ತನ್ನ ಬದುಕಿನೊಂದಿಗೆ ಕಂಡುಕೊAಡ ಸತ್ಯಗಳು. ಇಂಥ ಅನೇಕ ಸತ್ಯಗಳನ್ನು, ಅದ್ಭುತಗಳನ್ನು, ಪ್ರಕೃತಿ ವೈಚಿತ್ರ್ಯಯಗಳನ್ನು ಆತ ಬಲ್ಲ. ಆತನ ತಿಳುವಿನ ಪಾತಳಿ ದೊಡ್ಡದು. ನಾಗರಿಕ ಪರಿಸರದಲ್ಲಿ ಗೇಲಿಯ ವಸ್ತುವಾಗಬಲ್ಲ ಮಂದಣ್ಣ ಪ್ರಕೃತಿಯ ಸಾನ್ನಿಧ್ಯದಲ್ಲಿ ಒಬ್ಬ "ಅದ್ಭುತ ಪ್ರಕೃತಿಶಾಸ್ತ್ರಜ್ಞ". ಇದನ್ನು ಕರ್ವಾಲೋ ಅವರೇ ಹೇಳುತ್ತಾರೆ. ಹೀಗೆ ನಾವು ನಮ್ಮ ಆಸಕ್ತಿಯ ಕೇಂದ್ರವನ್ನು ಕರ್ವಾಲೋ ಅವರಿಂದ ಮಂದಣ್ಣನಿಗೆ ವರ್ಗಾಯಿಸುತ್ತೇವೆ. ಆದರೆ ಅದು ಅಲ್ಲಿಗೇ ನಿಲ್ಲುತ್ತದೆ ಎಂದು ಹೇಳಲು ಬರುವುದಿಲ್ಲ. ಯಾಕೆಂದರೆ ಬಿರ್ಯಾನಿ ಕರಿಯಪ್ಪ ಇದ್ದಾನೆ; ಹಾವುಗೊಲ್ಲರ ಎಂಗ್ಟ ಇದ್ದಾನೆ. ಅವರು ಪ್ರಕೃತಿಯ ಸಖ್ಯದಲ್ಲಿ ಪಡೆಯುವ ಹನುಮದ್ವಿಕಾಸ ನಮ್ಮ ಆಸಕ್ತಿಯನ್ನು ಕೆರಳಿಸದೆ ಇರಲು ಹೇಗೆ ಸಾಧ್ಯ? ಪರಿಣತಿ, ತಜ್ಞತೆ, ಚಾಕಚಾಕ್ಯತೆ ಎಲ್ಲ ಪದಗಳನ್ನು ಕೊಳ್ಳೆ ಹೊಡೆಯುವ ಅವರು ನಮ್ಮ ಆಸಕ್ತಿಯನ್ನೂ ಕಸಿದುಕೊಂಡು ಬಿಡುತ್ತಾರೆ.

## References


1. ತೇಜಸ್ವಿ-ಕರ್ವಾಲೋ-ಪುಸ್ತಕ ಪ್ರಕಾಶನ,ಮೈಸೂರು, 1992.
2. ಬಿ.ಎನ್. ಶಾರದಾ (ಸಂ),'ಸಮಾಜವಾದವೇ ಪರ್ಯಾಯ', ಸಂಬುದ್ಧ ಪ್ರಕಾಶನ, 2004.
3. ಪೂರ್ಣಚಂದ್ರ ತೇಜಸ್ವಿ, 'ಅಣ್ಣನ ನೆನಪು', ಪುಸ್ತಕ ಪ್ರಕಾಶನ, ಮೈಸೂರು. 1996.
4. ನಟರಾಜ್ ಹುಳಿಯಾರ್ (ಸಂ), ರಾಮ ಮನೋಹರ ಲೋಹಿಯಾ ಚಿಂತನೆ', 2008.
5. ಕಾದAಬರಿಗಳ ವಿಮರ್ಶೆ, ಲಕ್ಷ್ಮೀನಾರಾಯಣ ಅರೋರಾ, ನಿರ್ದೇಶಕರು ಪ್ರಸಾರಾಂಗ, ಮೈಸೂರು ವಿ.ವಿ, 2008.
6. ಕೇಶವ ಶರ್ಮ, ಕೆ. ನವೋದಯ ವಿಮರ್ಶೆ ತಾತ್ವಿಕ ನಿಲುವುಗಳು, ಜನವಾದಿ ಪ್ರಕಾಶನ, 1990.
7. ನಾಯಕ, ಜಿ.ಹೆಚ್,ನಿರಪೇಕ್ಷ (ಸಾಹಿತ್ಯ ವಿಮರ್ಶೆ), ಅಕ್ಷರ ಪ್ರಕಾಶನ, ಸಾಗರ, 1984.
8. ನಾಯಕ, ಜಿ.ಹೆಚ್, ಅನಿವಾರ್ಯ. ಅಕ್ಷರ ಪ್ರಕಾಶನ, ಸಾಗರ, 1980.